ಪ್ರ. ಸಂ. 309 (727)

ಶ್ರೀ ಬಿ. ಗಂಗಣ್ಣ.--ಅಧ್ಯಕ್ಷರೇ, ಶಿರಾದಿಂದ ಇಲ್ಲಿಗೆ ಬಂದು ಹಾಲ್ಟ್ ಆಗುವ ಬಸ್ಸು 8-15 ಗಂಟೆಗೆ ಬರುತ್ತದೆ. ಶಿರಾದಿಂದ ಯಲನಾಡು ಕಡೆ ಹೋಗುವ ಪ್ರಯಾಣಿಕರಿಗೆ ಬಸ್ ಇಲ್ಲದೆ, ಹಾಗೂ ಬೆಂಗಳೂರಿನಿಂದ ನೇರವಾಗಿ ಊರಿಗೆ ಹೋಗಲು ಬಸ್ ಇಲ್ಲದೆ ಬಹಳ ತೊಂಭರೆಯಾಗಿದೆ. ಆದ್ದರಿಂದ ದಯವಿಟ್ಟು ಶಿರಾದಿಂದ ಒಂದು ಪ್ರತ್ಯೇಕವಾಗಿ ಬಸ್ ಹಾಕುವುದಕ್ಕೆ ಕ್ರಮಗೊಳ್ಳುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.--ಈಗ ಪ್ರತ್ಯೇಕವಾಗಿ ಬಸ್ಸನ್ನು ಶಿರಾದಿಂದ ಯಲನಾಡಿನ ಕಡೆಗೆ ಓಡಿಸುವ ಬಗ್ಗೆ ಖಂಡಿತವಾಗಿ ಪರಿಶೀಲಿಸುತ್ತೇನೆ. ಆದರೆ ಅಲ್ಲಿ ರಾತ್ರಿ ತಂಗುವ ಬಸ್ಸುಗಳನ್ನು ಸದ್ಯಕ್ಕೆ ಬಿಡಲಿಕ್ಕೆ ಆಗುವುದಿಲ್ಲ.

ಪ್ರ. ಸಂ. 308 (888)

ಶ್ರೀ ಮಹದೇವ್.--ಸನ್ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆ ಕೊಟ್ಟಿದ್ದೇನೆ. ಆದರೆ ಇದುವರೆಗೂ ನನಗೆ ಉತ್ತರ ಬಂದಿಲ್ಲ

ಶ್ರೀ ಎಸ್. ಆರ್. ಬೊಮ್ಮಾಯಿ --ಅಧ್ಯಕ್ಷರೆ, ಈ ಪ್ರಶ್ನೆ ಕೈಗಾರಿಕಾ ಇಲಾಖೆಗೆ ಸಂಬಂಧಪಟ್ಟ ವಿಷಯವಲ್ಲ. ಈ ಪ್ರಶ್ನೆ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಪ್ರಶ್ನೆ. ಅವರ ಪ್ರಶ್ನೆ ಎಂದು ಇರುತ್ತದೆ ಅವ್ರೊತ್ತು ಹಾಕಿಕೊಳ್ಳಬೇಕು.

ಅಧ್ಯಕ್ಷರು.--ಸದ್ಯಕ್ಕೆ ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಖಾದಿ ಮತ್ತು ಗ್ರಾಮೋದ್ಯೋಗ ಬೋರ್ಡಿನಿಂದ ಈ ವರ್ಷ ಉದ್ದಿಮೆದಾರರು ನೀಡಲಾದ ಸಾಲದ ವಿವರ.

312 (816) ಡಾ. ವಿ. ಎಸ್. ಆಚಾರ್ಯ (ಉಡುಪಿ) ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ 1983-84 ರಲ್ಲಿ ಈ ವರೆಗೆ ನೀಡಿರುವ ಸಾಲವೆಷ್ಟು ಹಾಗೂ ಇದರಲ್ಲಿ ಸಹಾಯಧನ ಎಷ್ಟು ;

ಆ) ಯಾವ ಯಾವ ವಿವಿಧ ಉದ್ಯೋಗಗಳಿಗೆ ಎಷ್ಟೆಷ್ಟು ಸಾಲ ಮತ್ತು ಸಹಾಯ ಧನ ನೀಡಲಾಗಿದೆ ?

ಇ) ಯಾವ ಯಾವ ಜಿಲ್ಲೆಗಳಿಗೆ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಎಷ್ಟೆಷ್ಟು ಸಾಲ ಬಿಡುಗಡೆ ಮಾಡಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).--

ಅ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು 1983-84 ನೇ ಸಾಲಿನಲ್ಲಿ 31-1-1984ರ ವರೆಗೆ 28, 91,000-00 ರೂಪಾಯಿ ಸಾಲ ಮತ್ತು 2, 54, 850-00 ರೂಪಾಯಿ ಅನುದಾನ ಬಿಡುಗಡೆ ಮಾಡಿದೆ.

ಆ) ಪಟ್ಟಿಯನ್ನು ಲಗತ್ತಿಸಿದೆ.

ಇ) ಪಟ್ಟಿಯನ್ನು ಲಗತ್ತಿಸಿದೆ.

Annexure to clause (B) of the L. A. question No. 816 by DR. V. S. Acharya

Statement showing the release of Loan and grant under various Khadi and village Industries during the year 1983-84 puto 31-1-1984

Sl. No.	Name of the Industry	Loan	Grant
1	2	3	4
1.	Processing of Cereals & Pulses	1,28,500-00	8,000-00
2	Non-Edible Oil & Soap	63,000-00	3,000-00

1	2	3	4
3.	Village Pottery	3,24,950-00	96,850-00
4.	Cane & Bamboo	--	--
5.	Forest Plant	--	--
6.	Fruit Processing	50,000-00	--
7.	Gobar Gas	54,250-00	--
8.	Fibre	--	--
9.	Hand Made Paper	--	--
10.	Gvrand Khandasari	56,200-00	
11.	Palmgur	--	--
12.	Village Oil	10,44,050-00	12,250-00
13.	Lime	3,72,000-00	5,000-00
14.	Village Leather	1,04,500-00	10,500-00
15.	Khadi (Cotton)	--	--
16.	Wool	--	--
17.	Silk	2,27,000-00	--
18.		--	--
19.	Khadi Working Fund	--	--
20.	Polyvastra	--	--
21.	Bee Keeping	--	--
22.	Cottage Match	--	2,350-00
23.	Carpentary & Blacksmithy	4,66,550-00	1,16,900-00
	Total	28,91,000-00	2.54,850-00

Annexure to clause (C) of the L. A. question No. 816 by DR. V. S. Acharya.

Statement showing the release of funds (as loan & grant) upto 31-1-1984 district wise

Sl No.	Name of the District	Loan	Grant
1	2	3	4
1.	Bangalore	2,08-500	13,850-00
2.	Kolar	1,38,300	21,900-00
3.	Tumkur	17,250	250-00
4.	Chitradurga	2,09,300	31,700-00
5.	Shimoga	84,500	46,000-00
6	Mysore	90,400	10,700-00
7.	Mandya	1,15,100	--
8.	Hassan	2,27,000	--
9.	Coorg	--	--
10.	Chickmaglore	54,250	--

1	2	3	4
11.	Mangalore	2,22,000	1,000-00
12	Belgaum	78,500	21,500-00
13	Dharwar	1,93,900	2,700-00
14.	Bijapur	2,85,600	12,300-00
15.	Karwar	13,000	6,700-00
16.	Gulburga	6,03,300	68,400-00
17.	Bellary	26 900	16,950-00
18	Raichur	2,50,000	--
19	Bidar	75,200	900-00
	Total	28,91,000	2,54,850-00

ಡಾ. ವಿ. ಎಸ್. ಆಚಾರ್ಯ.--ಮಾನ್ಯ ಅಧ್ಯಕ್ಷರೇ, ಖಾದಿ ಗ್ರಾಮೋದ್ಯೋಗ ಗ್ರಾಮಗಳಲ್ಲಿರುವಂಥಾದ್ದು, ಗ್ರಾಮಗಳಲ್ಲಿರುವಂಥಾ ಸಂಖ್ಯಾದಾಯಕ ತಂತ್ರಜ್ಞಾನ ಕಸುಬುಗಳನ್ನು ಮಾಡುವವರಿಗೆ ಪರಿಹಾರ ಕೊಡುವ ದೃಷ್ಟಿಯಿಂದ ಇಡೀ ರಾಜ್ಯದಲ್ಲಿ ಕೇವಲ 2೫ ಲಕ್ಷ, 2ಲಕ್ಷ ಸಬ್ಸಿಡಿ ಏನು ಕೊಟ್ಟಿದ್ದಾರೆ ಅದು ಕಡಿಮೆಯಲ್ಲವೇ ? ಎರಡನೆಯದು ಜಿಲ್ಲಾವಾರು ಪಟ್ಟಿಯನ್ನು ಕೊಟ್ಟಿದ್ದಾರೆ. ಇದರಲ್ಲಿ ಸಾಕಷ್ಟು ಜಿಲ್ಲೆಗಳಲ್ಲಿ ಬಂಡವಾಳ ಸರಿಯಾಗಿ ಹಂಚಿಕೆಯಾಗಿಲ್ಲ ಇದರಲ್ಲಿ ತಾರತಮ್ಯ ಕಂಡು ಬರುತ್ತಿದೆ ನಮ್ಮ ಜಿಲ್ಲೆಯಲ್ಲಿ ಸಾಬೂನು ಬೆತ್ತ, ಬೆಲ್ಲ ಜಿಪ್ಸಿನ ಸುಣ್ಣ, ಜೇನು ಇವುಗಳನ್ನು ವಿಶಿಷ್ಟವಾಗಿ ತಯಾರಿಸುತ್ತಾರೆ. ಇವರಿಗೆ ಸರಿಯಾದ ರೀತಿಯಲ್ಲಿ ಬಂಡವಾಳ ಹಂಚಿಕೆಯಾಗಿಲ್ಲ ಈ ಜಿಲ್ಲೆಗಳಲ್ಲಿನ ಕಷ್ಟವನ್ನು ಅಧಿಕಾರಿಗಳು ಗಮನಿಸದಂತೆ ಇರುವುದು ಕಾಣುತ್ತದೆ ಹಾಗೂ ಹಂಚಿಕೆ ಕಡಿಮೆಯಾಗಿರುವುದರ ಬಗ್ಗೆ ಅಧಿಕಾರಿಗಳು ಗಮನಹರಿಸಲಿಲ್ಲವೇ ? ಈ ಒಂದು ವಿಚಾರದಲ್ಲಿ ಗ್ರಾಮೋದ್ಯೋಗ ಮಂಡಲಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದನ್ನು ತಾವು ನೋಡಬಹುದು ಪೂರಕ ಬಂಡವಾಳದಲ್ಲಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ಅವರು ಪಡೆದುಕೊಂಡಿದ್ದಾರೆ. ಮೊನ್ನೆ ಜನವರಿಯಲ್ಲಿ 28 ಲಕ್ಷ ರೂಪಾಯಿ ಕೊಟ್ಟಿರುವುದು ಕಡಿಮೆ ಅಲ್ಲವೆ ? ಮೊದಲನೆಯದು ಬಂಡವಾಳ ಕಡಿಮೆ ಕೊಟ್ಟಿರುವುದು, ಎರಡನೆಯದು ತಾರತಮ್ಯ, ಮೂರನೆಯದು ಭ್ರಷ್ಟಾಚಾರ, ನಾಲ್ಕನೆಯದು ಸ್ಥಾನ ಹಿತಾಸಕ್ತಿಗಳಿಗೆ ಸಂಪ್ರದಾಯಕವಾಗಿ ಕೊಟ್ಟಿರುವುದು ಇನ್ನು ನನ್ನ ಜಿಲ್ಲೆಗೆ ಕೇವಲ ಒಂದು ಸಾವಿರ ರೂಪಾಯಿಗಳ ಸಬ್ಸಿಡಿ ಕೊಟ್ಟಿದ್ದಾರೆ. ನನ್ನ ಜಿಲ್ಲೆಗೆ ಏನು ಕೊಡಬೇಕಾಗಿತ್ತೋ ಅಷ್ಟು ಸಬ್ಸಿಡಿ ಕೊಟ್ಟಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.--ಎಲ್ಲಾ ಜಿಲ್ಲೆಗಳಲ್ಲಿ ಖಾದಿ ಬೋರ್ಡಿನ ಚಟುವಟಿಕೆಗಳನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಖಾದಿಬೋರ್ಡ್ ಆಕ್ಟಿಗೆ ಅಮೆಂಡ್‌ಮೆಂಟ್ ಮಾಡುತ್ತಿದ್ದೇವೆ. ಪ್ರತಿ ಜಿಲ್ಲೆಗೆ ಒಬ್ಬ ಸದಸ್ಯರು ಇರತಕ್ಕದ್ದು ಎಂದು ಸೂಚನೆ ಮಾಡಿದ್ದೇವೆ. ಪ್ರತಿಯೊಂದು ಜಿಲ್ಲೆಗೂ ಸಲಹಾ ಸಮಿತಿಯನ್ನು ನೇಮಕ ಮಾಡುವುದಕ್ಕೆ ಅವಕಾಶ ಮಾಡಿದ್ದೇವೆ. ಆ ಬಗ್ಗೆ ಅಮೆಂಡ್‌ಮೆಂಟ್ ಮಾಡುತ್ತಿದ್ದೇವೆ ಈ ಬಿಲ್ಲು ತಮ್ಮ ಮುಂದೆ ಇಷ್ಟರಲ್ಲೇ ಬರುತ್ತದೆ. ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಈ ಚಟುವಟಿಕೆಗಳು ಹೆಚ್ಚು ಆಗಿವೆ. ಈಗ ಖಾದಿ ಗ್ರಾಮೋದ್ಯೋಗದಲ್ಲಿ ಕೆಲವರು ಆಸ್ಥೆ ವಹಿಸುತ್ತಿದ್ದಾರೆ. ಯಾವುದೇ ಜಿಲ್ಲೆಯಿಂದ ಅರ್ಜಿ ಕೊಟ್ಟು ಎಷ್ಟು ಹಣ ಬೇಕು ಎಂದು ಕೇಳಿದರೆ ನಾವು ಹಣ ಕೊಡುತ್ತೇವೆ. ತಾರತಮ್ಯ ಇಲ್ಲ

ಭ್ರಷ್ಟಾಚಾರದ ಬಗ್ಗೆ ಒಂದೆರಡು ಪ್ರಕರಣ ವಿಚಾರಮಾಡಲಿಕ್ಕೆ ಹೇಳಿದ್ದೇನೆ. ಹೆಚ್ಚಿನದು ಏನಾದರೂ ಇದ್ದರೆ ತಿಳಿಸಿ ನಾನು ವಿಚಾರ ಮಾಡುತ್ತೇನೆ.

ಶ್ರೀ ಬಿ. ಬಿ ರಪ್ಪಾಜಿ — ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಲಿಯಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ದುರುಪಯೋಗವಾಗಿದೆ ಎನ್ನುವುದು ಅನೇಕಸಾರಿ ಈ ಸಭೆಯಲ್ಲಿ ಬಂದಿದೆ. ಈ ಹಣ ವಸೂಲಾಗಿದೆಯೇ ಅಥವಾ ವಸೂಲು ಮಾಡಲು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ಮತ್ತು ಇತ್ತೀಚೆಗೆ ನೀವು ಗ್ರಾಮೋದ್ಯೋಗಕ್ಕೆ ಕೊಡತಕ್ಕ ಸಿಬ್ಬಂದಿಗಳ ಸಂಬಳ ಮತ್ತು ಇತರೇ ಖರ್ಚಿಗಾಗಿ ಕೊಡುವ ಹಣ ಇವೊತ್ತಿನ ದಿನಸ ಲೆಕ್ಕ ಹಾಕಿದರೆ ಏನೇನೂ ಸಾಲದು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ —ಈ ಕಾನೂನಿಗೆ ತಿದ್ದುಪಡಿ ತರುವುದು ಅವಶ್ಯಕವಾಗಿದೆ. ಪ್ರತಿ ಜಿಲ್ಲೆಗೂ ಕಮಿಟಿ ಮಾಡಬೇಕಾಗಿದೆ. ತನ್ನ ಮುಂದೆ ಇಷ್ಟರಲ್ಲೇ ಬಂದು ಬಿಲ್ಲನ್ನು ತರುತ್ತೇವೆ ನಂತರ ವಿವರವಾಗಿ ಚರ್ಚೆ ಮಾಡೋಣ. ಈ ಬಗ್ಗೆ ಬಿಗಿಯಾಗಿ ಕೆಲಸ ಮಾಡುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಹಿಂದಿನ ವರ್ಷ ಒದಗಿಸಿದ ಹಣಕ್ಕಿಂತ ಈಗ ಇನ್ನೂ ಒಂದು ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಒದಗಿಸಿದ್ದೇವೆ. ಈಗ ಕೊಟ್ಟಿರುವ ಹಣ ಸರಿಯಾಗಿ ವಿನಿಯೋಗವಾಗ ಬೇಕಾದರೆ ಮಂಡಳಿಯು ಸರಿಯಾಗಿ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಪಿ. ರಾಂದೇವ್.– ಮಾನ್ಯ ಅಧ್ಯಕ್ಷರೇ, ರಾಜ್ಯದ ಖಾದಿ ಗ್ರಾಮೋದ್ಯೋಗದ ಅಡಳಿತದ ಬಗ್ಗೆ ಮತ್ತು ಆಲ್ಲಿ ನಡೆಯತಕ್ಕ ಬ್ರಷ್ಟಾಚಾರದ ಬಗ್ಗೆ ಎನ್ ಕ್ವೈರಿಗೆ ಆರ್ಡರ್ ಆಗಿದೆ ಒಂದು ಕಮಿಟಿಯಿಂದ ಏನೋ ರಿಪೋರ್ಟ್ ಬಂದಿದೆ. ಆದರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. 2ನೆಯದು 2 ವರ್ಷಗಳಿಂದ ನಡೆಯುತ್ತಿದೆ ಆದರ ಮೇಲೆ ಯಾವಾಗ ರಿಪೋರ್ಟ್ ಬರುತ್ತದೆಂದು ಕೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.--ಶ್ರೀ ಸಿದ್ದವೀರಪ್ಪನವರ ಕಾಲದಿಂದಲೂ ಇದರಲ್ಲಿ ಅಮೃತ ಹಾರ ಇದ್ದೇ ಇದೆ.

ಅಧ್ಯಕ್ಷರು.—313 (859) ಈ ಪ್ರಶ್ನೆ ತಪ್ಪಾಗಿ ಸಾರಿಗೆ ಮಂತ್ರಿಗಳವರ ಹೆಸರಿಗೆ ಬಂದಿದೆ.

ಶ್ರೀ ಪಿ ರಾಂದೇವ್.--ಆಂಥಾದ್ದು ಆಗಾಗ್ಗೆ ಆಗುತ್ತಿರುತ್ತದೆ

ಅಧ್ಯಕ್ಷರು.--ಮುಂದಿನ ಪ್ರಶ್ನೆ ಶ್ರೀ ಎಂ. ಎಂ. ನಾಣಯ್ಯನವರಿಂದ.

ತಲಕಾವೇರಿಯಲ್ಲಿ ಲೋಕೋಪಯೋಗಿ ಇಲಾಖೆಯವರ ಅತಿಥಿ ಗೃಹ

314 (894) ಶ್ರೀ ಎಂ. ಎಂ ನಾಣಯ್ಯ (ಸುಡಿಕೇರಿ).--ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೆ ?

ಅ) ಭಾಗಮಂಡಲ ಹೋಬಳಿ ತಲಕಾವೇರಿಯಲ್ಲಿರುವ ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹವನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮದವರು ಅಧೀನಕ್ಕೆ ತೆಗೆದುಕೊಂಡಿರುವುದು ನಿಜವೆ? ಹಾಗಿದ್ದಲ್ಲಿ ಯಾವ ಉದ್ದೇಶಕ್ಕಾಗಿ;

ಆ) ಪ್ರಸ್ತುತ ಕಟ್ಟಡವನ್ನು ಅಭಿವೃದ್ಧಿ ಪಡಿಸಲು ಏನಾದರೂ ಪ್ರಸ್ತಾವನೆ ಇದೆಯೇ ;

ಇ) ಈ ಉದ್ದೇಶಕ್ಕಾಗಿ ಒದಗಿಸಿರುವ ಹಣವೆಷ್ಟು ?

ಶ್ರೀ ಎಂ. ರಘುಪತಿ (ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು).— ಅ) ಇಲ್ಲ. ತಲಕಾವೇರಿಯಲ್ಲಿರುವ ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹವನ್ನು ಪ್ರವಾಸಿಗರಿಗೆ ವಸತಿ ಮತ್ತು ಭೋಜನ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ಪ್ರವಾಸೋದ್ಯಮ ಇಲಾಖೆಗೆ ತೆಗೆದುಕೊಳ್ಳಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ

ಶ್ರೀ ಎಂ ರಘುಪತಿ.--ನಾಣಯ್ಯನವರು ಉಪ ಪ್ರಶ್ನೆ ಕೇಳುವುದಕ್ಕೆ ಮೊದಲೇ ಸ್ವಲ್ಪ ಸಮಂಜಸವಾದ ಉತ್ತರ ಇಲ್ಲ ಎಂದು ಮನನರಿಕೆಯಾಗಿದೆ. ಆದುದರಿಂದ ಅದನ್ನು ನಾವೇ ವಹಿಸಿಕೊಂಡು ಇನ್ನು 50 ಸಾವಿರ ಹಣವನ್ನು ಖರ್ಚು ಮಾಡಿ ಅಲ್ಲಿನ ಅತಿಥಿ ಗೃಹವನ್ನು ಸರಿಪಡಿಸಿ ಪ್ರವಾಸಿಗರಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಎಂ. ಎಂ. ನಾಣಯ್ಯ. --ಅದಕ್ಕೆ ನನ್ನ ಧನ್ಯವಾದಗಳು.

ಅಧ್ಯಕ್ಷರು.--904ನೇ ಪ್ರಶ್ನೆ.

(ಸದಸ್ಯರ ಗೈರುಹಾಜರಿ)

ಅಧ್ಯಕ್ಷರು.--ಶ್ರೀ ಆನಂದರಾವ್, 508ನೇ ಪ್ರಶ್ನೆ.

(ಸದಸ್ಯರ ಗೈರು ಹಾಜರಿ)

ಅಧ್ಯಕ್ಷರು --ಶ್ರೀ ಕೆ. ಎಸ್. ಕಾಳಮುರಿಗೌಡ, 822 ನೇ ಪ್ರಶ್ನೆ

(ಸದಸ್ಯರ ಗೈರುಹಾಜರಿ)

ಅಧ್ಯಕ್ಷರು.--ಪ್ರಶ್ನೋತ್ತರ ವೇಳೆ ಮುಗಿಯಿತು.